ಕರ್ನಾಟಕ ಸರ್ಕಾರ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ,**

**ಆನಂದರಾವ್ ವೃತ್ತ, ಬೆಂಗಳೂರು-09.**

ಸಂಖ್ಯೆ: ಟಿಸಿಎನ್/188/2019-20 ದಿನಾಂಕ: 05-02-2020

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: 2019-20ನೇ ಸಾಲಿನ 2ನೇ ವರ್ಷದ ಬಿ.ಎಸ್‌ಸಿ (ಎಂ.ಎಲ್.ಟಿ) ಪದವಿ ಶಿಕ್ಷಣಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ವೈದ್ಯಕೀಯ ಶಿಕ್ಷಣ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ನ್ನು ಆಯ್ಕೆ ಮಾಡಿ ನಿಯೋಜಿಸಿರುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಅಧಿಸೂಚನೆ ಪತ್ರ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ 95 ಆರ್‌ಜಿಯು 2012 ದಿನಾಂಕ 23-08-2013.
2) ನಿರ್ದೇಶನಾಲಯದ ಅಧಿಸೂಚನೆ ದಿನಾಂಕ 21-10-2019.

*****

2019-20ನೇ ಸಾಲಿನ ಬಿ.ಎಸ್‌ಸಿ (ಎಂ.ಎಲ್.ಟಿ) ಪದವಿ ವ್ಯಾಸಂಗಕ್ಕೆ ಈ ಕೆಳಕಂಡ ಅರ್ಹ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳನ್ನು ಅವರವರ ಹೆಸರಿನ ಮುಂದೆ ಸೂಚಿಸಿರುವ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಆಯ್ಕೆ ಮಾಡಲಾಗಿದೆ.

| ಕ್ರ.ಸಂ. | ನೌಕರರ ಹೆಸರು ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ | ಆಯ್ಕೆಯಾಗಿರುವ ವೈದ್ಯಕೀಯ ಮಹಾವಿದ್ಯಾಲಯ |
|---|---|---|
| 1 | ಶ್ರೀ ಸಂತೋಷ ವ್ಹಿ. ಪತ್ತಾರ<br>ಸಾರ್ವಜನಿಕ ಆಸ್ಪತ್ರೆ, ರಾಯಬಾಗ,<br>ಬೆಳಗಾವಿ ಜಿಲ್ಲೆ. | ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು. |
| 2 | ಶ್ರೀಮತಿ ಆಶಿಯಾ ಬೇಗಂ<br>ಪ್ರಾಥಮಿಕ ಆರೋಗ್ಯ ಕೇಂದ್ರ, ಬಸ್ಸಾಪುರ,<br>ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ. | ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು. |
| 3 | ಶ್ರೀ ಮಂಜುನಾಥ ಎಸ್.ಎನ್.<br>ಮೈಸೂರು ವೈದ್ಯಕೀಯ ಕಾಲೇಜು ಮತ್ತು<br>ಸಂಶೋಧನಾ ಸಂಸ್ಥೆ, ಮೈಸೂರು. | ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು. |
| 4 | ರಘು ಹೆಚ್ ಎಸ್<br>ಮೈಸೂರು ವೈದ್ಯಕೀಯ ಕಾಲೇಜು ಮತ್ತು<br>ಸಂಶೋಧನಾ ಸಂಸ್ಥೆ, ಮೈಸೂರು. | ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು. |

ಸದರಿ ನೌಕರರಿಂದ ಕರ್ನಾಟಕ ನಾಗರೀಕ ಸೇವಾ ನಿಯಮವಳಿ 61ರ ಅಪೆಂಡಿಕ್ಸ್ 2 ಎ ನ ನಮೂನೆ 19ರಲ್ಲಿರುವಂತೆ ಮುಚ್ಚಳಿಕೆ ಪತ್ರವನ್ನು ರೂ. 100/- (ಒಂದು ನೂರು ಮಾತ್ರ)ರ ಬಂಧ ಪತ್ರದಲ್ಲಿ ಪಡೆದು ನೌಕರರು ಪ್ರವೇಶ ಪಡೆಯಲು ಅನುಕೂಲವಾಗುವಂತೆ ನಿಗದಿತ ದಿನಾಂಕದೊಳಗಾಗಿ ಕರ್ತವ್ಯದಿಂದ ಬಿಡುಗಡೆ ಮಾಡುವುದು.

ನೌಕರರಿಂದ ಪಡೆದ ಮುಚ್ಚಳಿಕೆ ಪತ್ರವನ್ನು ಸಂಸ್ಥೆಯ ಮುಖ್ಯಸ್ಥರು ಮೇಲು ರುಜುವಿನೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯಕ್ಕೆ ಕಳುಹಿಸುವುದು. ಒಂದು ವೇಳೆ ಮುಚ್ಚಳಿಕೆ ಪತ್ರ ಪಡೆಯದೇ ವ್ಯಾಸಾಂಗಕ್ಕೆ ಬಿಡುಗಡೆ ಮಾಡಿದ್ದಲ್ಲಿ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳೆ ಜವಾಬ್ದಾರರಾಗಿರುತ್ತಾರೆ.

ಈ ವ್ಯಾಸಾಂಗದ ಅವಧಿಯಲ್ಲಿ ನೌಕರರು ಕರ್ನಾಟಕ ನಾಗರೀಕ ಸೇವಾ ನಿಯಮ 61ರ ಅಪೆಂಡಿಕ್ಸ್ '2ಎ' 1 ರನ್ವಯ ಪ್ರತಿ ನಿಯೋಜನಾ ಸೌಲಭ್ಯಕ್ಕೆ ಅರ್ಹರಾಗಿರುತ್ತಾರೆ.

**ಆಯ್ಕೆಯಾದ ಸೇವಾನಿರತ ನೌಕರರಿಗೆ ಸೂಚನೆ:-**

1) 2019-20ನೇ ಸಾಲಿನ ಬಿ.ಎಸ್.ಸಿ (ಎಂ.ಎಲ್.ಟಿ) ಪದವಿ ವ್ಯಾಸಂಗಕ್ಕೆ ಆಯ್ಕೆಯಾದ ಸೇವಾ ನಿರತ ವೈದ್ಯಕೀಯ ಪ್ರಯೋಗ ಶಾಲಾ ಟೆಕ್ನಾಲಜಿಸ್ಟ್‌ಗಳನ್ನು ಕೂಡಲೇ ಪ್ರಾಂಶುಪಾಲರು, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮತ್ತು ಮೈಸೂರು ಇವರಲ್ಲಿ ಮೂಲ ಪ್ರಮಾಣ ಪತ್ರಗಳೊಂದಿಗೆ ವರದಿ ಮಾಡಿಕೊಳ್ಳುವುದು.

2) ಬಿ.ಎಸ್.ಸಿ (ಎಂ.ಎಲ್.ಟಿ) ಉನ್ನತ ವ್ಯಾಸಂಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ಆಯ್ಕೆ ಮಾಡಲಾದ ಕಾಲೇಜಿನಲ್ಲಿ ಮಾತ್ರ ಹಾಜರಾಗತಕ್ಕದ್ದು. ಯಾವುದೇ ಕಾರಣಕ್ಕೆ ಕಾಲೇಜು ಬದಲಾವಣೆಗೆ ಅವಕಾಶ ಇರುವುದಿಲ್ಲ.

3) ಬಿ.ಎಸ್.ಸಿ (ಎಂ.ಎಲ್.ಟಿ) ಪದವಿಗೆ ಆಯ್ಕೆಯಾದ ಅಭ್ಯರ್ಥಿಗಳು, ಅಂತಿಮ ಪರೀಕ್ಷೆಯಲ್ಲಿ ಅನುತ್ತೀರ್ಣರಾದರೆ ಹಾಗೂ ತರಬೇತಿಯನ್ನು ಮಧ್ಯಂತರ ಅವಧಿಯಲ್ಲಿ ಮೊಟಕುಗೊಳಿಸಿದಲ್ಲಿ ವ್ಯಾಸಂಗದ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ ಪ್ರಕಾರ ನೀಡಿರುವ ವೇತನ ಹಾಗೂ ಇತರ ಭತ್ಯೆಗಳನ್ನು ಸರ್ಕಾರಕ್ಕೆ ಹಿಂದಿರುಗಿಸವ ಷರತ್ತಿಗೊಳಪಟ್ಟಿರುತ್ತದೆ.

4) ಬಿ.ಎಸ್.ಸಿ (ಎಂ.ಎಲ್.ಟಿ) ಪದವಿಗೆ ತರಬೇತಿಗೆ ಹಾಜರಾದ ಅಭ್ಯರ್ಥಿಗಳು ಒಂದು ಬಾರಿ ತರಬೇತಿಗೆ ಪ್ರವೇಶವನ್ನು ಪಡೆದು ಮದ್ಯದಲ್ಲಿ ಸದರಿ ಕೋರ್ಸ್‌ನ್ನು ಬಿಟ್ಟಲ್ಲಿ ಮುಂದೆ 3 ವರ್ಷಗಳವರೆಗೆ ಅರ್ಜಿಯನ್ನು ಸಲ್ಲಿಸ ತಕ್ಕದಲ್ಲವೆಂದು ಸೂಚಿಸಿರುತ್ತಾರೆ.

**"ಟಿಪ್ಪಣಿ ನಿರ್ದೇಶಕರು (ಆಕುಕ ಸೇವೆಗಳು) ರಿಂದ ಅನುಮೋದಿಸಲ್ಪಟ್ಟಿದೆ."**

**ಪೀಠಸ್ಥರು,**
ಬಿ.ಎಸ್.ಸಿ (ಎಂ.ಎಲ್.ಟಿ) ಪದವಿ ವ್ಯಾಸಂಗದ ಆಯ್ಕೆ ಸಮಿತಿ,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

**ಪ್ರತಿಯನ್ನು ಈ ಕೆಳಕಂಡವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

...3

2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ನಿರ್ದೇಶಕರು ಮತ್ತು ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
4. ನಿರ್ದೇಶಕರು ಮತ್ತು ಡೀನ್, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು/ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಪ್ರಾಂಶುಪಾಲರು, ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಮತ್ತು ಮೈಸೂರು.
7. ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, -----------
8. ಆಡಳಿತ ವೈದ್ಯಾಧಿಕಾರಿಗಳು/ ಮುಖ್ಯ ವೈದ್ಯಾಧಿಕಾರಿಗಳು/ ವೈದ್ಯಾಧಿಕಾರಿಗಳು/ ಸಮುದಾಯ ಆರೋಗ್ಯ ಕೇಂದ್ರ/ ಪ್ರಾಥಮಿಕ ಆರೋಗ್ಯ ಕೇಂದ್ರ/ ಸಾರ್ವಜನಿಕ ಆಸ್ಪತ್ರೆ/ ತಾಲ್ಲೂಕು ಆಸ್ಪತ್ರೆ------
9. ಸಂಬಂಧಪಟ್ಟ ನೌಕರರಿಗೆ.
10. ಕಛೇರಿ ಪ್ರತಿ./ ಹೆಚ್ಚುವರಿ ಪ್ರತಿ.